**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1007/2019**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ತಿಪ್ಪೇಶಿ | ಸಿ.ಡಬ್ಲ್ಯೂ-07 |
| ತಂದೆ ಹೆಸರು | : | ರಂಗನಾಯ್ಕ | ಪಿ.ಡಬ್ಲ್ಯೂ-06 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಬಿಲ್ಡಿಂಗ್ ಕೆಲಸ | |
| ವಾಸಸ್ಥಳ | : | ರಾಮ್ಜಿಹಟ್ಟಿ | ದಿಃ 06.08.2026 |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಚಾಸಾ-1 ನನ್ನ ತಂದೆ . ಚಾಸಾ-6 ನನ್ನ ತಾಯಿ.

ಚಾಸಾ-1 ಮತ್ತು 6 ರವರು ರಾಮ್ಜಿಹಟ್ಟಿಯ ಸರ್ವೆ ನಂಬರ್ 42 ರ ಹೊಲದಲ್ಲಿ ವಾಸವಾಗಿರುತ್ತಾರೆ. ದಿನಾಂಕ 26.06.2019 ರಂದು ಬೆಳಿಗ್ಗೆ 08-30 ರ ಸಮಯದಲ್ಲಿ ನನ್ನ ತಂದೆ ದೂರವಾಣಿ ಕರೆ ಮಾಡಿ ನಮ್ಮ ಜಮೀನಿನಲ್ಲಿ ನಾವು ಕೆಲಸ ಮಾಡುತ್ತಿದ್ದಾಗ ಪಕ್ಕದ ಜಮೀನಿನವರಾದ ಆರೋಪಿತರು  ಬಂದು ಗಲಾಟೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.  ಗಲಾಟೆಯಲ್ಲಿ ಚಾಸಾ-1 ರವರಿಗೆ ಕುತ್ತಿಗೆಯ ಎಡಭಾಗದ  ಮೇಲೆ ಊತ ಬಂದಿರುತ್ತದೆ.  ನಾನು ಬೆಂಗಳೂರಿನಿಂದ ಬಂದು ಆಸ್ಪತ್ರೆಗೆ ಹೋಗಿ, ಚಾಸಾ-1 ರವರನ್ನು ಘಟನೆಯ ಬಗ್ಗೆ ವಿಚಾರಿಸಿರುತ್ತೇನೆ. ಆರೋಪಿತರು ಚಾಸಾ-1 ರವರಿಗೆ ಕೆಟ್ಟ ಪದಗಳಿಂದ ಬೈದು ಸಾಯಿಸುತ್ತೀವಿ ಎಂದು ಹೇಳಿದ ಬಗ್ಗೆ ನನಗೆ ತಿಳಿಸಿದ್ದರು.

ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಜಿಲ್ಲಾ ಆಸ್ಪತ್ರೆಯಲ್ಲಿ ಸ್ಕ್ಯಾನ್ ಮಾಡಿಸಿದಾಗ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ.  ಈ ಬಗ್ಗೆ ನಾನು ಪೊಲೀಸರಿಗೆ ತಿಳಿಸಿರುತ್ತೇನೆ.

ಸಾಕ್ಷಿಯು 2 ಮತ್ತು 3 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಬಿ ಪಿ., ಆರೋಪಿ ಪರ ವಕೀಲರಿಂದಃ**

ನಮ್ಮ ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನಮಗೂ ಮತ್ತು ಆರೋಪಿತರ ನಡುವೆ ದಾರಿ ವಿಚಾರವಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ದಾರಿ ವಿಚಾರವಾರ ಆರೋಪಿತರು ಚಾಸಾ-1 ರ ವರ ವಿರುದ್ಧ ತಹಸೀಲ್ದಾರ್ ರವರಿಗೆ ದೂರನ್ನು ನೀಡಿದ ಮೇರೆಗೆ ತಹಸೀಲ್ದಾರ್ ರವರು ಬಂದು ಆರೋಪಿತರಿಗೆ ದಾರಿ ಬಿಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾರಿ ವಿಚಾರವಾಗಿ ನನ್ನ ತಂದೆ ತೊಂದರೆ ಮಾಡುತ್ತಿದ್ದಕ್ಕೆ ಸಂಬಂಧಿಸಿದಂತೆ ಆರೋಪಿತರು ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರು ದಾರಿಯಲ್ಲಿ ಓಡಾಡುತ್ತಿದ್ದಾರೆ ಎಂಬ ಕಾರಣಕ್ಕಾಗಿ ಚಾಸಾ-1 ರವರು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಬೆಂಗಳೂರಿನಿಂದ ಬಂದು ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಬೆಂಗಳೂರಿನಿಂದ ಸಂಜೆ 04-30 ಸಮಯದಲ್ಲಿ ಚಳ್ಳಕೆರೆಗ ಬಂದಿರುತ್ತೇನೆ. ನಾನು ಬಂದಾಗ ಚಾಸಾ-1 ರವರು ಚಳ್ಳಕೆರೆ ಆಸ್ಪತ್ರೆಯಲ್ಲಿಯೇ ಇದ್ದರು. ಚಳ್ಳಕೆರೆ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದೆವು. ನನ್ನ ತಂದೆಗೆ ಊತ ಬಂದಿರುವುದನ್ನು ನಾನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಸದರಿ ವಿಚಾರವನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಚಾಸಾ-1 ರವರು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹೇಳಿಕೆ ನೀಡಿರುತ್ತೇನೆ. ಜಿಲ್ಲಾ ಆಸ್ಪತ್ರೆಯಲ್ಲಿ ಸ್ಕ್ಯಾನ್ ಮಾಡಿಸಿದಾಗ ಮೂಳೆ ಮುರಿದಿತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಕೆಟ್ಟ ಪದಗಳಿಂದ ಬೈದಿರುವ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಂದೆಯೊಂದಿಗೆ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ರವರು ಹೊಲದ ಬದುವಿನಲ್ಲಿ ಹೋಗುವಾಗ ಎಡಭಾಗಕ್ಕೆ ಬಿದ್ದು ಪೆಟ್ಟು ಮಾಡಿಕೊಂಡು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುವುದಕ್ಕೆ ಪೂರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಖುದ್ದು ಮಾಹಿತಿ ಇಲ್ಲದೇ ಇದ್ದರೂ ನನ್ನ ತಂದೆಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಎಡಬುಜದ ಮೂಳೆ ಮುರಿದಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ